ತಾರೀಖು 20ನೆ ಡಿಸೆಂಬರ್ 1906.

ನಂ. ಜೆ. 1706 ಲೆಜಿಸ್. 8—06—4, 1903ನೆ ಇಸವಿಯ 1ನೆ ನಂಬರಿನ ಮೈಸೂರು ರೆಜಿಸ್ಟ್ರೇಷನ್ ರೆಗ್ಯುಲೇಷನಿನ 78ನೆ ಪ್ರಕರಣಾನುಸಾರವಾಗಿ, ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು, 1905ನೆ ಇಸವಿ ಫೆಬ್ರವರಿ 28ನೆ ತಾರೀಖಿನ ಜೆ. 24 3 ರೆಜಿಸ್. 12—4ನೆ ನಂಬರಿನ ಇಸ್ತಿಹಾರ್‌ನಾಮೆಯ 17ನೆ ಕಲಮಿನಲ್ಲಿ ನಮೂದಾದ ರುಸುಮಿನ ದರಕ್ಕೆ ಬದಲಾಗಿ ಈ ಕೆಳಗೆ ನಮೂದು ಮಾಡುವ ದರವನ್ನು 1907ನೆ ಇಸವಿಯ ಜನವರಿ ಮೊದಲನೆ ತಾರೀಖಿನಿಂದ ಮತ್ತು ಅದಕ್ಕೆ ತರುವಾಯ ಜಾರಿಯಲ್ಲಿ ತರಬೇಕೆಂದು ಹುಕುಂ ಕೊಡಲು ಅಪ್ಪಣೆ ದಯಪಾಲಿಸಿರುತ್ತಾರೆ :—

"XVII. ರೆಜಿಸ್ಟರ್ ಮಾಡಲ್ಪಡುವ ಎಲ್ಲಾ ಪತ್ರಗಳ ಮೇಲೂ, 300 ಕ್ಕಿಂತ ಹೆಚ್ಚಿಗೆ ಮಾತುಗಳಿದ್ದರೆ, 300ರ ಮೇಲೆ ಇರುವ ಪ್ರತಿ 100 ಅಥವಾ 100ಕ್ಕೆ ಕಡಮೆಯಾದ ಮಾತುಗಳಿಗೆ 4 ಆಣೆಯ ದರದಂತೆ ರುಸುಮನ್ನು ವಸೂಲ್ಮಾಡತಕ್ಕದ್ದು."

ತಾರೀಖು 20ನೆ ಡಿಸೆಂಬರ್ 1906.

ನಂ. ಜೆ. 1709 ರೆಜಿಸ್. 11—06—6, 1903ನೆ ಇಸವಿಯ 1ನೆ ನಂಬರಿ ಮೈಸೂರು ರೆಜಿಸ್ಟ್ರೇಷನ್ ರೆಗ್ಯುಲೇಷನಿನ 78ನೆ ಪ್ರಕರಣಾನುಸಾರವಾಗಿ, ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು, 1878ನೆ ಇಸವಿಯ ಆಗಸ್ಟು 12ನೆ ತಾರೀಖಿನ 131ನೆ ನಂಬರಿನ ಇಸ್ತಿಹಾರ್‌ನಾಮೆಯಲ್ಲಿ ಪ್ರಕಟಿಸಲ್ಪಟ್ಟ ರುಸುಮಿನ ಪಟ್ಟಿಯ 8ನೆ ಕಲಮಿನಲ್ಲಿ ಕಾಣಿಸಿದ ರುಸುಮಿನ ದರಕ್ಕೆ ಬದಲಾಗಿ ಈ ಕೆಳಗಿನ ದರವನ್ನು 1907ನೆ ಇಸವಿಯ ಜನವರಿ ಮೊದಲನೆ ತಾರೀಖಿನಿಂದ ಸೇರಿಸಬೇಕೆಂದು ಅಪ್ಪಣೆ ದಯಪಾಲಿಸಿರುತ್ತಾರೆ :—

VIII. ಬಂದೇಬಂದು ಖತಾಯಿತಿಯನ್ನು ಅಥವಾ ದಸ್ತ್ವೇಜನ್ನು ಹುಡುಕುವುದು. ಅಥವಾ ಪರೀಕ್ಷಿಸಿ ನೋಡುವುದು :—

(1) ಯಾವ ವರ್ಷದ ಬುಕ್ಕುಗಳಲ್ಲಿ ಹುಡುಕುವಿಕೆ ನಡೆಯುವದೊ ಆ ಮೊದಲನೆ ವರ್ಷಕ್ಕೆ ಪ್ರತಿ ಖತಾಯಿತಿ ಅಥವಾ ದಸ್ತ್ವೇಜಿಗೆ..... .....ಬಂದು ರೂಪಾಯಿ.

(2) ಹಾಗೆ ಬುಕ್ಕುಗಳಲ್ಲಿ ಹುಡುಕುವಿಕೆ ನಡೆಯುವ ಪ್ರತಿ ಇತರ ವರ್ಷಕ್ಕೂ ಪ್ರತಿ ಖತಾಯಿತಿಗೆ ಅಥವಾ ದಸ್ತ್ವೇಜಿಗೆ.....ನಾಲ್ಕು ಆಣೆ.

ಹುಕುಂ ಮೇರಿಗೆ,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಸೆಕ್ರೆಟರಿ.